doc-568
T-P-2

Reg No B G 155 21—10—72

In The State First Golden Jubilee Celebrated Paper 'Satyavadi' daily, Mysore 4

ದಸರಾ ಸಾಂಸ್ಕೃತಿಕ ಕಾರ್ಯಕ್ರಮ

ರಲ್ಲಿ

1 9 7 2

★

23 10 72 ರ ಕಾರ್ಯಕ್ರಮ

ಸಂಜೆ 6 ಗಂಟೆಗೆ

ಮದ್ರಾಸಿನ ಚಿಟ್ಟಿಬಾಬು

ಮತ್ತ

ಅವರಿಂದ

ವೀಣಾವಾದನ

ಕ್ರಾಫರ್ಡ್ ಹಾಲ್‌ನಲ್ಲಿ

★

ಸಂಜೆ 7 ಗಂಟೆಗೆ

ಎ. ಎನ್. ಶೇಷಾಚಾರ್ ಮತ್ತು

ತಂಡದವರಿಂದ ಕನ್ನಡದಲ್ಲಿ ನಾಟಕ

"ಎಚ್ಚಮನಾಯಕ"

ವಸ್ತುಪ್ರದರ್ಶನ ಪ್ರದೇಶದಲ್ಲಿ

ಸತ್ಯವಾದಿ

ಅಣ್ಣಾ ಡಿ ಎಂ ಕೆ

ಮದರಾಸು— ಅಣ್ಣಾ ಡಿ ಎಂ ಕೆ ಯ 1000 ಯೂನಿಟ್ಟುಗಳು ಜಿಲ್ಲೆಯಲ್ಲಿ ಸ್ಥಾಪನೆಗೊಂಡುದರಿಂದ, ಶಾಖೆಗಳನ್ನು ಸ್ಥಾಪಿಸುವ ಕಾರ್ಯ ನಡೆಯುತ್ತದೆಯೆಂದು ಎಂ. ಜಿ ಆರ್. ರವರು ಹೇಳಿದರು – ತಾ॥ 23 ರಂದು ಅವರು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳಲಿರುವರು – ಇವರ ಪರದ ಚಳವಳಿ ರಾಜ್ಯದಾದ್ಯಂತ ನಡೆಯುತ್ತಲೇ ಇದೆ – ಅಣ್ಣಾ ಡಿಎಂಕೆ ಗೆ ಸಾಮೂಹಿಕವಾಗಿ ಪಕ್ಷಾಂತರ ಪ್ರಾರಂಭವಾಗಿದೆ – ತಿರುಚಿಯಲ್ಲಿನ ಪೆರಂಬಲೂರಿಗೆ ಗೌರ್ನರ್ ಶ್ರೀ ಷಾರವರು ಭೇಟಿಕೊಟ್ಟಿದ್ದಾಗ ಡಿಎಂಕೆ ಸರಕಾರವನ್ನು ವಜಾಮಾಡಬೇಕೆಂದು ಟ್ರೌ ಕಾಂಗ್ರೆಸ್ ಮನವಿ ಅರ್ಪಿಸಿತು.

★ ದೇಶದಲ್ಲಿ "ನಿರೋಧ್" ಸಂತತಿ ಪ್ರತಿಬಂಧಕ ಸಲಕರಣೆಯ ಅಭಾವವನ್ನು ಸರಿಪಡಿಸಲು ಜಪಾನು ತಯಾರಿಕಾ ಸಲಕರಣೆಯ ತುರ್ತು ಆಮದಿನ 51 ಮಿಲಿಯ ದಲ್ಲೀ ಪ್ರಥನು ಭಾಗ ಇನ್ನು ಕೆಲವು ದಿನಗಳಲ್ಲಿ ಮುದ್ರಾಸಿಗೆ ಬರಲಿದೆ.

ಅಣೆಕಟ್ಟು, ನಿರಾವರಿ ಪ್ರಾಜೆಕ್ಟುಗಳು

ಹೊಳೆನರಸೀಪುರ— ಸರಕಾರವು ಇನ್ನು ಮುಂದೆ ಅಣೆಕಟ್ಟು ಮತ್ತು ನಿರಾವರಿ ಪ್ರಾಜೆಕ್ಟುಗಳಿಗೆ ಹೆಚ್ಚಾಗಿ ಖರ್ಚು ಮಾಡಲಿದೆ ಎಂದು ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು ಗಣ್ಣೆಕಡದ ಹತ್ತಿರ ಹೇಮಾವತಿ ನದಿ ಮೇಲಿನ ರೂ. 10.5 ಲಕ್ಷ ಸೇತುವೆಯನ್ನು ಉದ್ಘಾಟಿಸುತ್ತಾ ಹೇಳಿದರು

○

ಏಕರೀತಿ ಶಾಸನ

ಬೆಂಗಳೂರು— ರಾಜ್ಯದ ವಿಶ್ವವಿದ್ಯಾನಿಲಯಗಳ ಬಗ್ಗೆ ಏಕರೀತಿ ಶಾಸನವು ಇನ್ನೆರಡು ತಿಂಗಳಲ್ಲಿ ಸಿದ್ಧವಾಗುವುದೆಂದು ವಿದ್ಯಾ ಮಂತ್ರಿ ಶ್ರೀ ಬದ್ರಿನಾರಾಯಣ್ ರವರು ಹೇಳಿದರು.

●

ಪೋಲೀಸ್ ಸ್ಮಾರಕ ದಿನ

ಮೈಸೂರು— ಅಖಿಲ ಭಾರತ ಪೋಲೀಸು ಸ್ಮಾರಕ ದಿನವು ಈ ಬೆಳಿಗ್ಗೆ ಜಲಪುರಿಯಲ್ಲಿ ಪೋಲೀಸು ಕಛೇರಿಗಳ ಮುಂದೆ ಆಚರಿಸಲಾಯಿತು.

●

ಕನ್ನಡ ಮೇಲಿನ ಅಭಿಮಾನ

ಬೆಂಗಳೂರು— ಬೆಂಗಳೂರು ವಿಶ್ವವಿದ್ಯಾನಿಲಯ ಬಿ. ಎ ಯ ಖಡ್ಡಾಯ ಇಂಗ್ಲೀಷು ಪ್ರಶ್ನಿಪತ್ರಿಕೆಯನ್ನು ಆಚಾರ್ಯ ಪಾಠಶಾಲೆಯ ವಿದ್ಯಾರ್ಥಿಗಳು ಕನ್ನಡದಲ್ಲಿ ಉತ್ತರಿಸಿದರು – ಕೆಲವರು ಉತ್ತರ ಬರೆಯದೇ ಹೊರಟುಹೋದರು – ವಿದ್ಯಾರ್ಥಿಗಳ ಕೇಳಿಕೆಯಾದ, ಮಾತೃಭಾಷೆಯಲ್ಲಿ ಇಂಗ್ಲೀಷನ್ನು ಕಲಿಸಬೇಕು ಮತ್ತದರಲ್ಲಿ ಉತ್ತರ ಬರೆಯುವ ಅವಕಾಶವಿರಬೇಕು ಎಂಬುದರ ಒತ್ತಾಯಕ್ಕಾಗಿ ಈ ಕ್ರಮ ಅನುಸರಿಸಲಾಯಿತು.

○

ದಿವ್ಯವಾಣಿ

ಧೈರ್ಯಶಾಲಿ ಮನುಷ್ಯನು ತನ್ನ ಆತ್ಮ ಗೌರವವನ್ನು ಬಿಟ್ಟುಕೊಡುವದಕ್ಕಿಂತ ಸಾವನ್ನೇ ಹೆಚ್ಚು ಇಷ್ಟಪಡುತ್ತಾನೆ.

— ಮಹಾತ್ಮಾ ಗಾಂಧಿ

ಮತ್ತೆ ಗಲಭೆ

ಬೆಂಗಳೂರು— ಟೆಲಿಫೋನ್ ಇಂಡಸ್ಟ್ರೀಸ್‌ನಲ್ಲಿ ನಿನ್ನೆ ಮಧ್ಯಾಹ್ನ ಊಟದ ಹೊತ್ತಿನ ಕಾಲಾವಕಾಶದಲ್ಲಿ ಕಾರ್ಮಿಕರ ಎರಡು ಗುಂಪಿನಲ್ಲಿ ಘರ್ಷಣೆಯಾಗಲು ಪೋಲೀಸರು ಎರಡು ಬಾರಿ ಗೋಳಿಬಾರು ಮಾಡಿದರು – ಗೋಳಿಬಾರಿನಲ್ಲಿ ಒಬ್ಬನೂ, ಘರ್ಷಣೆಯಲ್ಲಿ 17 ಮಂದಿಯೂ ಗಾಯಗೊಂಡರು.

★

ಹೊಟ್ಟೆಗಿಲ್ಲದೆ ಸಾವು

ಗುಲ್ಬರ್ಗ— ಚಿತ್ತಾಪುರ ತಾಲ್ಲೂಕಿನ ತೆಂಗಾಲಿ ಗ್ರಾಮದಲ್ಲಿ 5 ಹೊಟ್ಟೆಗಿಲ್ಲದ ಸಾವುಗಳು ವರದಿಯಾಗಿದೆಯೆಂದು ಶ್ರೀ ಧರ್ಮರಾವ್ ಅಫ್ಸಲ್ಪುರ್‌ಕರ್, ಎಂ.ಪಿ. ಹೇಳಿರುವರು.

★

ಹೇಮಾವತಿ ಪ್ರಾಜೆಕ್ಟ್

ಮಂಡ್ಯ— ಹೇಮಾವತಿ ಪ್ರಾಜೆಕ್ಟನ್ನು ಏನೇ ಆದರೂ ಮುಗಿಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ನಾಗಮಂಗಲದ ಒಂದು ಸಭೆಯಲ್ಲಿ ಹೇಳಿದರು.

●

ಪೋಲೀಸರಿಗೆ ಹೊರು

ಮೈಸೂರು— ಖ್ಯಾತ ಚಲನಚಿತ್ರ ತಾರೆ ಮತ್ತು ನೃತ್ಯಗಾರ್ತಿ ಶ್ರೀಮತಿ ಜಯಲಲಿತರವರು, ದಸರಾ ವಸ್ತುಪ್ರದರ್ಶನದಲ್ಲಿ ನಿನ್ನೆ ನೃತ್ಯಮಾಡಲು ಒಪ್ಪಿ, ರೂ. 500 ಮುಂಗಡ ಪಡೆದಿದ್ದರೂ ಸಮಯಕ್ಕೆ ಬರದೆ ವ್ಯವಸ್ಥಾಪಕ ಸಮಿತಿಗೆ ಅಪಮಾನ ಮತ್ತು ಮೋಸಮಾಡಿ, ನೃತ್ಯವನ್ನು ನೋಡಲು ಬಂದಿದ್ದ ಸಹಸ್ರಾರು ಜನರನ್ನು ನಿರಾಶೆಗೊಳಿಸಿದ ಬಗ್ಗೆ ಪೋಲೀಸರಿಗೆ ದೂರು ಕೊಡಲಾಗಿದೆಯೆಂದೂ, ತನಿಖೆ ನಡೆಸಲಾಗುತ್ತಿದೆಯೆಂದೂ ಗೊತ್ತಾಗಿದೆ.

●

ಅಲಹಾಬಾದು– ರೂ. 1 ಲಕ್ಷ 2 ನಿಧಿಯನ್ನು ಪ್ರಖ್ಯಾತ ಕ್ರಿಕೆಟ್ ಆಟಗಾರ ವಿನೂ ಮನ್ಕಾಡ್‌ರಿಗೆ ಅಲಹಾಬಾದು ಕ್ರಿಕೆಟ್ ಸಂಘದ ಪರವಾಗಿ ಉತ್ತರ ಪ್ರದೇಶದ ಗೌರ್ನರ್‌ರವರು ಇತ್ತರು.

Bank Road Bahusar A Fair Price Shop in Actual Practice

ಮ್ಯೂನಿಕ್‌ನಲ್ಲಿ ಲಿಂಗ ಪರೀಕ್ಷೆ

ಮ್ಯೂನಿಕ್— ಇಲ್ಲಿಯ ಒಲಂಪಿಕ್ ಆಟಗಳಲ್ಲಿ ಭಾಗವಹಿಸುವ ಮಹಿಳೆಯರ ಲಿಂಗ ಪರೀಕ್ಷೆ ಬಹು ಸುಲಭದಲ್ಲಾಯಿತು ; ಮಹಿಳೆಯರಿಗೆ ನೊಂದು ನೋವು ಕಷ್ಟಗಳಿರಲಿಲ್ಲ ; ಏಕೆಂದರೆ, ಅವರು ತಮ್ಮ ಒಂದು ರೋಮ ತೆಗೆದುಕೊಟ್ಟರೆ ಸಾಕು; ವೈದ್ಯರು ಅದನ್ನು ಪರೀಕ್ಷಿಸಿ, ಅದು ಸ್ತ್ರೀಯ ರೋಮವೋ ಅಥವಾ ಗಂಡಸಿನ ರೋಮವೋ, ಎಂದು ಹೇಳುವರು. (ಐ ಪಿ ಎಫ್)

ಅಜಾದ್ ಭೀಮ ಸೇನೆ

ಗುಲ್ಬರ್ಗ— ಶ್ರೀ ಶಿವರಾಂರವರು ಖಾಯಂ ಅಧ್ಯಕ್ಷರಾಗಿರುವ "ಅಜಾದ್ ಭೀಮ ಸೇನೆ" ಸ್ಥಾಪಿತವಾಗಿದೆ.

ನಂಬಿಕೆ ದೃಢಪಟ್ಟಿತು

ಮಡಕೇರಿ— ತಲಕಾವೇರಿಯಲ್ಲಿ ತೀರ್ಥೋದ್ಭವ ಕಾಲದಲ್ಲಿ ಹಾವು ಕಾಣಿಸಿಕೊಂಡರೆ ಅಪಶಕುನವೆಂಬ ನಂಬಿಕೆ ದೃಢಪಟ್ಟಿತು — ಆಗ ಒಬ್ಬಾತನು ಅಶ್ವತ್ಥ ಪ್ರದಕ್ಷಣೆ ಮಾಡುತ್ತಿದ್ದಾಗ ಹಾವು ಕಡಿದು ಆಸ್ಪತ್ರೆಗೆ ಸೇರಿಸಲ್ಪಟ್ಟನು.

ಅಮೇರಿಕಾ ಅಧ್ಯಕ್ಷ ಚುನಾವಣೆ

ವಾಷಿಂಗ್ಟ— ಅಮೇರಿಕಾ ಇತಿಹಾಸದಲ್ಲೇ ದೊಡ್ಡದಾದ 81 ಮಿಲಿಯ ವೋಟರುಗಳು ನವೆಂಬರ್ 7 ರಂದು ಅಧ್ಯಕ್ಷರ (ನಿಕ್ಸ್ ಅಥವಾ ಮೆಕ್‌ಗೌರ್ನ್) ಚುನಾವಣೆಯಲ್ಲಿ ಮತ ನೀಡುವರು.

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದಕ್ಕಿಂತ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಳ್ಳಲು ಚಿತ್ರ

ಆನೆ - ಹುಡಗ

ಭಾರತದಲ್ಲಿ ಗೋವಧೆ ಪೂರ್ಣ



ನಿಶೇಧವಾಗಲಿ

Contribute Liberally to the National Defence Fund

ವುಡ್‌ಲಾಂಡ್ 20-10-72 ರಂದ ಆನೋಘ 4ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯನೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ, ದಿನ 3 ಪ್ರದರ್ಶನಗಳು

ಅಪೆರಾ 2ನೇ ವಾರ

ಬಾಂಧವ್ಯ

ಪಾತ್ರ – ಅಶ್ವಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ, ಸಂಧ್ಯ ರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

SHAKTI SUDHA

A Superb Tonic

Help The Gorakshana

— Humanitarian Propoganda Monthly ....

Protect the Cow

Quality Printing — Neat Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satyavad Press Chamarajapuram Mysore